ಅರಿತವನಾಗಿದ್ದ. ಪರಿಸ್ಥಿತಿಯನ್ನು ನಿಭಾಯಿಸಲು ವಾರದಿಂದ ಐದಾರು ಬಾರಿ ತಾನೇ ಖುದ್ದಾಗಿ ಲಾಟಿ ಚಾರ್ಜ್ ಮತ್ತು ಗೋಲಿಬಾರ್ ಮಾಡಿದ್ದ. ಅದನ್ನು ನಾನೂ, ಜಿಲ್ಲಾಧಿಕಾರಿ ಇಬ್ಬರೂ ಸಮರ್ಥಿಸಿಕೊಂಡಿದ್ದೆವು ಕೂಡಾ. ಅರ್ಧ ಗಂಟೆ ಹಿಂದೆ ಕಾಫಿ ಕುಡಿಯುತ್ತಾ, "ಹಸಿವಾದಾಗ ಅನ್ನ ಕೊಡದ, ಬಾಯಾರಿಕೆಯಾದಾಗ ನೀರು ಹನಿಸದ, ನಿದ್ದೆ ಬಂದಾಗ ಚಾಪೆ–ಹಾಸಿಗೆ ಕೊಡದ, ವಾಸಿಸಲು ವಸತಿ ಒದಗಿಸದ, ಕಾಯಿಲೆ ಬಿದ್ದಾಗ ಔಷಧೋಪಚಾರ ಮಾಡದ ಜಾತಿ, ಧರ್ಮಗಳ ಬಗ್ಗೆ ಮನುಷ್ಯ ಏಕೆ ಇಷ್ಟು ತಲೆಕೆಡಿಸಿಕೊಳ್ಳುತ್ತಾನೆ, ಹೊಡೆದಾಡುತ್ತಾನೆ ಎಂಬುದನ್ನು ಖುದ್ದಾಗಿ ಆಯಾ ಧರ್ಮಗಳ ದೇವತೆಗಳೇ, ಅವಧೂತರೇ ಬಂದು ಹೇಳಬೇಕು..." ಎಂದು ಬೇಸರದಿಂದ ನಾನು ಹೇಳಿದಾಗ ರಂಗಾರಾವ್, "ಜಗತ್ತಿನ ಎಲ್ಲಾ ಪ್ರಭೇದಗಳ ಪೈಕಿ ಮನುಷ್ಯನೇ ಭಯಂಕರವಾದ ಹುಚ್ಚು ಪ್ರಾಣಿ ಇರಬಹುದು ಸರ್. ಇದಕ್ಕೆ ಕಾರಣ ಅವನ ಬ್ರೈನ್. ಜಾತಿ, ಧರ್ಮ, ನಂಬಿಕೆ, ಸಂಪ್ರದಾಯ ಮುಂತಾದ ಸಂಗತಿಗಳು ಮನುಷ್ಯನ ಮೆದುಳಿನಲ್ಲಿ ನರಪ್ರೇಕ್ಷಕಗಳೆಂಬ ರಾಸಾಯನಿಕಗಳನ್ನು ಉತ್ಪಾದನೆ ಮಾಡುತ್ತವೆ. ಈ ರಾಸಾಯನಿಕಗಳು ಅವನ ರಕ್ತದಲ್ಲಿ ಭಯೋತ್ಪಾದಕ ಅಂಶಗಳನ್ನು ತಯಾರು ಮಾಡುತ್ತವೆ. ಇಂಥ ಅಂಶಗಳಿಂದ ಹುಟ್ಟಿಕೊಳ್ಳುವ ವ್ಯಾಧಿಗಳನ್ನು ಸಂಪೂರ್ಣವಾಗಿ ಗುಣಪಡಿಸಲು ಯಾವ ಔಷಧಿಗಳಿಂದಲೂ ಸಾಧ್ಯವಾಗುವುದಿಲ್ಲ" ಎಂದು ಕಾಫಿ ಕುಡಿದು ಎದ್ದು ಹೋಗಿದ್ದ. ಈತ ಎಂ.ಎಸ್ಸಿ ಕೆಮಿಸ್ಟ್ರಿ ಡಿಗ್ರಿ ಮಾಡಿದ್ದರೂ, ಫೊರೆನ್ಸಿಕ್ ಸೈಕಾಲಜಿ ಮತ್ತು ನ್ಯೂರೋಲಜಿಗಳನ್ನು ಚೆನ್ನಾಗಿ ಓದಿಕೊಂಡಿದ್ದಾನೆ ಮತ್ತು ಯುಪಿಎಸ್ಸಿ ಪರೀಕ್ಷೆಯಲ್ಲಿ ಸಮಾಜಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡಿದ್ದ!

ಮನೆಗೆ ಹೋಗುವ ಮೊದಲು ನಗರದ ಗಂಭೀರ ಪ್ರದೇಶಗಳಲ್ಲಿ ಒಂದು ರೌಂಡ್ ಹಾಕೋಣವೆಂದು ಹೊರಡಲು ಸಿದ್ಧನಾಗುತ್ತಿದ್ದಾಗ ಪಿ.ಎ ಬಂದು, "ಸರ್, ತಮ್ಮನ್ನು ಭೇಟಿಯಾಗಲು ಮಧ್ಯಾಹ್ನದಿಂದ ಯಾರೋ ಮೂರು ಬಾರಿ ಬಂದು ಹೋಗಿದ್ದರು. ನಾನು ಈ ಕ್ರಿಟಿಕಲ್ ಸಂದರ್ಭದಲ್ಲಿ ಸಾಹೇಬರು ಆಫೀಸಿಗೆ ಬರುವ ಸಮಯದ ಬಗ್ಗೆ ಏನೂ ಹೇಳಲಾಗದೆಂದು ಹೇಳಿ ಕಳಿಸಿದ್ದೆ. ಈಗ ನಾಲ್ಕನೇ ಸಾರಿ ಬಂದಿದ್ದಾರೆ..." ಎಂದು ತಲೆ ಕೆರೆದುಕೊಂಡಿದ್ದರು. ಇದು ಮಾಮೂಲಿಯಾದ ಯಾವುದೋ ತರಲೆ ಗಿರಾಕಿ ಇರಬಹುದೆಂದುಕೊಂಡು, "ನೀವೇ ನೋಡ್ತಿದ್ದೀರಲ್ಲ ರಾಮಾನುಜಮ್, ಯಾರನ್ನೂ ಮಾತನಾಡಿಸೋ ಮೂಡ್ ಸಹ ಇಲ್ಲ. ಟೆನ್ಸ್ ಏರಿಯಾಗಳಲ್ಲಿ ಒಂದು ರೌಂಡ್ ಹಾಕಿ ಮನೆಗೆ ಹೋಗೋಣ ಅಂತ ಹೊರಡ್ತಾ ಇದೀನಿ. ನಾಳೆ ಬೆಳಗ್ಗೆ ಹನ್ನೊಂದು ಗಂಟೆಯ ಹೊತ್ತಿಗೆ ಬರಲಿಕ್ಕೆ ಹೇಳಿ..." ಎಂದಿದ್ದೆ. ಪಿ.ಎ ಅಲ್ಲಿಂದ ಮೂರು ಹೆಜ್ಜೆ ಡೋರ್ ಕಡೆ ಹೆಜ್ಜೆ ಹಾಕಿದವರು, "ಆತ ತುಂಬಾ **frustration**ನಲ್ಲಿರುವಂತೆ ಕಾಣುತ್ತಾನೆ ಸರ್, ನೋಡಿದರೆ ಲೋಕಲ್ಲೈಟ್ ಅಲ್ಲ ಅನ್ನಿಸ್ತಾ ಇದೆ. ಏನೇ ಆದ್ರೂ ನಾಳೆ ಬರಲಿಕ್ಕೆ ಹೇಳ್ತೀನಿ ಬಿಡಿ" ಎಂದು ಚೇಂಬರಿನಿಂದ ಹೊರ ನಡೆದಿದ್ದರು. ಪಿ.ಎ ನನಗಿಂತಲೂ ವಯಸ್ಸು ಮತ್ತು ಅನುಭವದಲ್ಲಿ ಹಿರಿಯರಾಗಿದ್ದರಿಂದ ಅವರ ಮಾತುಗಳು ಸಡನ್ನಾಗಿ ನನ್ನ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸಿದ್ದವು. ಯಾರೋ, ಏನೋ ಪಾಪ, ಏನು ಸಮಸ್ಯೆಯೋ. ಪೊಲೀಸ್ ಇಲಾಖೆಗೆ ಹೊತ್ತು ಗೊತ್ತು ಏನಿದೆ? ನಮ್ಮದು ಟ್ವಂಟಿಫೋರ್ ಇಂಟು ಸೆವೆನ್ ಸರ್ವೀಸ್ ಅಲ್ವಾ ಎಂಬ ಎಚ್ಚರಿಕೆ ಥಟ್ಟನೆ ಹುಟ್ಟಿತ್ತು. ಕೂಡಲೇ ಇಂಟರ್ ಕಾಮ್‌ನಲ್ಲಿ ಆ ವ್ಯಕ್ತಿಯನ್ನು ಒಳಕಳಿಸಲು ಪಿ.ಎಗೆ ಹೇಳಿದ್ದೆ. ಒಂದು ನಿಮಿಷದಲ್ಲಿ ವ್ಯಕ್ತಿಯೊಂದು ಬಾಗಿಲು ತಳ್ಳಿ ತಲೆಯನ್ನು ಮಾತ್ರ ಒಳಗಿಟ್ಟು, "ಮೆ ಐ ಕಮ್ ಇನ್..." ಎಂದಿತ್ತು. ಬನ್ನಿ ಎಂದಿದ್ದೆ. ಯಾರೋ ತುಂಬಾ ಸಂಸ್ಕಾರ ಇರುವ ಮನುಷ್ಯ ಅನ್ನಿಸಿತು. ನಗುತ್ತಾ ಒಳಗೆ ಬಂದ ವ್ಯಕ್ತಿ ಕೆಂಪಗಿದ್ದು ಉದ್ದನೆಯ ತಲೆಕೂದಲು ಬಿಟ್ಟಿದ್ದನಲ್ಲದೆ ಗಡ್ಡವನ್ನೂ ಸುಮಾರಾಗಿಯೇ ಬೆಳೆಸಿಕೊಂಡಿದ್ದ. ಎರಡೂ ತುಟಿಗಳ ಮೇಲೂ ಸಿಗರೇಟು ಸುಟ್ಟ ಗುರುತು ಸ್ಪಷ್ಟವಾಗಿ ಮೂಡಿರುವುದರಿಂದ ಆತ ಚೈನ್ ಸ್ಮೋಕರ್ ಎಂಬುದು ದೃಢವಾಗಿತ್ತು. ಭುಜದಲ್ಲಿ ಬೆಲೆಬಾಳುವ ಲೆದರ್ ಬ್ಯಾಗ್ ನೇತಾಡುತ್ತಿತ್ತು. ಜೀನ್ಸ್ ಪ್ಯಾಂಟ್ ತೊಟ್ಟವನು ಅದಕ್ಕೆ ಮ್ಯಾಚ್ ಆಗುವಂಥ ಟೀ ಶರ್ಟ್ ತೊಟ್ಟಿದ್ದು, ಪ್ರವಾಸದಲ್ಲಿರುವ ವ್ಯಕ್ತಿಯಂತೆ ಕಾಣುತ್ತಿದ್ದ. ಮುಖದಲ್ಲಿ ಒಂಥರಾ